ಒ ಎಸ್ ನಂ. 64/2024
**ಪಿ ಡಬ್ಲ್ಯೂಃ 01**

**ದಿಃ 09-04-2026 ರಂದು ಸಾಕ್ಷಿಯನ್ನು ಕರೆಸಿ ಪ್ರತಿಜ್ಞೆ ಮಾಡಿಸಲಾಯಿತು.**

**ಪಾಟೀ ಸವಾಲುಃ 6 ನೇ ಪ್ರತಿವಾದಿ ಪರ ಶ್ರೀ ವಿ ಬಿ ಎಸ್ ವಕೀಲರಿಂದಃ**

ದಾವೆಯನ್ನು ನಾವು ಸಲ್ಲಿಸಿದ್ದೇವೆ. ನಮ್ಮ ತಾಯಿ ದಾವೆಯನ್ನು ನಮ್ಮ ಅಜ್ಜನ ವಿರುದ್ಧ ಸಲ್ಲಿಸಿದ್ದಾರೆ. ನಮ್ಮ ಅಜ್ಜ ಮೃತಪಟ್ಟಿದ್ದಾನೆ. ದಾವೆ ಸಲ್ಲಿಸಲು ನನ್ನ ತಾಯಿ ಮಾಹಿತಿ ನೀಡಿದ್ದಾರೆ. ನನ್ನ ಜನ್ಮ ದಿನಾಂಕ 05.06.2004. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕ್ಕೆ ನನ್ನ ತಾಯಿ ಮಾಹಿತಿ ನೀಡಿದ್ದಾರೆ. ದಾವಾ ಆಸ್ತಿಗಳು ಹುಬ್ಬಳ್ಳಿಯಲ್ಲಿ ಇರುತ್ತವೆ. ಪುನಃ ಸಾಕ್ಷಿ ಸೂರಶೆಟ್ಟಿಕೊಪ್ಪದಲ್ಲಿ ಕೂಡಾ ಇರುತ್ತವೆ ಅನ್ನುತ್ತಾರೆ. ದಾವಾ ಆಸ್ತಿಗಳಲ್ಲಿಯ ಹುಬ್ಬಳ್ಳಿಯ 5051/ಬಿ1 ಮತ್ತು 5051/ಬಿ2 ಇವುಗಳನ್ನು ನಮ್ಮ ಅಜ್ಜ ಖರೀದಿಸಿರುತ್ತಾರೆ. ಅವುಗಳ ವಿಸ್ತೀರ್ಣ ಹಾಗೂ ಚಕಬಂದಿ ಗೊತ್ತಿಲ್ಲ. ಸೂರಶೆಟ್ಟಿ ಗ್ರಾಮದ ಜಮೀನಿನ ಸರ್ವೆ ನಂ 138/8, ವಿಸ್ತೀರ್ಣ ಗೊತ್ತಿಲ್ಲ.

ಹುಬ್ಬಳ್ಳಿಯ ಕೃಷ್ಣಾಪುರ ಬಡಾವಣೆಯ ಆಸ್ತಿ ನಂ 5051/48 ಬ 1 ರ ಆಸ್ತಿಯನ್ನು ನಮ್ಮ ಅಜ್ಜ ಸೋಮನಗೌಡ ಇವರು 31.03.2004 ರಂದು ಖರೀದಿಸಿದ್ದಾರೆ ಅಂದರೆ ನಿಜ. ಸದರಿ ಆಸ್ತಿಯನ್ನು ಸೋಮನಗೌಡ ಸ್ವತಃ ದುಡಿದು ಗಳಿಸಿದ ಆಸ್ತಿ ಅಂದರೆ ಸರಿಯಲ್ಲ. ನಮ್ಮ ಅಜ್ಜ ತನ್ನ ಮನತೆನದ ಅಡಚಣೆ ಹಾಗೂ ಸಾಲ ತೀರಿಸುವ ಸಲುವಾಗಿ ಆಸ್ತಿ ಮಾರಾಟಕ್ಕೆ ಇಟ್ಟಿದ್ದ ಅಂದರೆ ಸರಿಯಲ್ಲ. ದಿನಾಂಕ 09.01.2006 ರ ನೋಂದಾಯಿತ ಕ್ರಯ ಪತ್ರದ ಮೂಲಕ 6ನೇ ಪ್ರತಿವಾದಿಯು ಮನೆ ಆಸ್ತಿಯನ್ನು ರೂ 6 ಲಕ್ಷಗಳಿಗೆ ನಮ್ಮ ಅಜ್ಜನಿಂದ ಖರೀದಿಸಿದ್ದಾರೆ ಅಂದರೆ ಸರಿಯಲ್ಲ. 6 ನೇ ಪ್ರತಿವಾದಿಯು ಮನೆ ಆಸ್ತಿ ಖರೀದಿಸಿದ ನಂತರ ತಾನೆ ಅದನ್ನು ಉಪಭೋಗ ಮಾಡುತ್ತಿದ್ದಾನೆ ಅಂದರೆ ಸರಿಯಲ್ಲ. ಮನೆ ಮಾರಾಟದ ವಿಷಯ ವಾದಿ ಹಾಗೂ 1 ರಿಂದ 5 ನೇ ಪ್ರತಿವಾದಿಯರಿಗೆ ಗೊತ್ತಿದೆ ಅಂದರೆ ನಿಜ.

6 ನೇ ಪ್ರತಿವಾದಿಯು ದಿನಾಂಕ 02.07.2015 ರಂದು ತಾನು ಖರೀದಿಸಿದ ಮನೆ ವ ಖುಲ್ಲಾ ಜಾಗೆ ಆಸ್ತಿ ನಂ 5051/48 ಬಿ1 ನ್ನು ಬಸವರಾಜ ತಂದೆ ಬಸಲಿಂಗಪ್ಪ ಬಡಿಗೇರ ಎನ್ನುವವರೆಗೆ ನೋಂದಾಯಿತ ಕ್ರಯ ಪತ್ರದ ಮೂಲಕ ಮಾರಾಟ ಮಾಡಿದ್ದಾರೆ ಅಂದರೆ ನಿಜ. ನಂತರ ಬಸವರಾಜ ಬಡಿಗೇರ ಇವರು ತಾವು ಖರೀದಿಸಿದ ಆಸ್ತಿಯನ್ನು ರುದ್ರಪ್ಪ ದ್ಯಾಮಪ್ಪ ಕುಂಬಾರ ಇವರಿಗೆ ನೋಂದಾಯಿತ ಕ್ರಯ ಪತ್ರದ ಮೂಲಕ ಮಾರಾಟ ಮಾಡಿದ್ದಾರೆ ಅಂದರೆ ನಿಜ. ನಂತರ ರುದ್ರಪ್ಪ ಕುಂಬಾರ ಇವರು ಸದರಿ ಮನೆ ಆಸ್ತಿಯನ್ನು 6 ನೇ ಪ್ರತಿವಾದಿಗೆ ದಿನಾಂಕ 16.05.2023 ರ ಕ್ರಯ ಪತ್ರದ ಮೂಲಕ ಮಾರಾಟ ಮಾಡಿದ್ದಾರೆ ಅಂದರೆ ನಿಜ. 6 ನೇ ಪ್ರತಿವಾದಿ ಆಸ್ತಿ ಖರೀದಿಸಿದಾಗಿನಿಂದ ಅದರ ವಹಿವಾಟಿನಲ್ಲಿ ಇದ್ದು ಅದಕ್ಕೆ ಯಾರು ತಕರಾರು ಮಾಡಿಲ್ಲ ಅಂದರೆ ನಿಜ. ಸದರಿ ಮಾರಾಟವನ್ನು ನಮ್ಮ ತಾಯಿ ಎಲ್ಲಿಯೂ ಪ್ರಶ್ನಿಸಿಲ್ಲ ಅಂದರೆ ಸರಿಯಲ್ಲ. ಮನೆ ಆಸ್ತಿಯನ್ನು ಸುಮಾರು 25 ವರ್ಷಗಳ ಹಿಂದೆ ಮಾರಾಟ ಮಾಡಿದ್ದು ದಾವೆ ಕಾನೂನಿನಲ್ಲಿ ಉರ್ಜಿತವಲ್ಲ ಅಂದರೆ ಸರಿಯಲ್ಲ. 6 ನೇ ಪ್ರತಿವಾದಿ

**ಓ ಎಸ್ ನಂ. 64/2024**
**ಪಿ ಡಬ್ಲ್ಯೂ: 01**

ಕಾನೂನು ಪ್ರಕಾರ ಖರೀದಿ ಮಾಡಿದ್ದು ಅದನ್ನು ಪ್ರಶ್ನಿಸಲು ನಮಗೆ ಹಕ್ಕು ಇಲ್ಲ ಅಂದರೆ ನಿಜ. ನಾನು ವಾದಿಯ ಮಾತು ಕೇಳಿ 6 ನೇ ಪ್ರತಿವಾದಿಗೆ ತೊಂದರೆ ನೀಡುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆ:** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೆ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಕಲಘಟಗಿ.